# ಲಾಕ್‌ಡೌನ್ ಕಾರಣದಿಂದ ಸೌಹಾರ್ದ ಸಹಕಾರ ಕ್ಷೇತ್ರದ ಮೇಲೆ ಉಂಟಾಗುವ ಪರಿಣಾಮ ಹಾಗೂ ಪರಿಹಾರೋಪಾಯಗಳು.

ಕರೋನಾ ರಕ್ಕಸನ ಅಟ್ಟಹಾಸಕ್ಕೆ ಇಡೀ ಜಗತ್ತು ನಲುಗಿದೆ. ಕರೋನಾ ಮಹಾಮಾರಿಯನ್ನು ತಡೆಗಟ್ಟಲು ಅನಿವಾರ್ಯವಾಗಿ ದೇಶವು ಲಾಕ್ಡೌನ್‌ಗೆ ಒಳಗಾಗಿದೆ. ಇದರ ಪರಿಣಾಮವಾಗಿ ಜಗತ್ತಿನ ಹಲವು ದೇಶಗಳಂತೆ ಭಾರತವೂ ಆರ್ಥಿಕ ಹಿಂಜರಿತವನ್ನು ಅನುಭವಿಸುತ್ತಿದೆ. ಕರೋನಾ ಮಹಾಮಾರಿಯ ಕರಿನೆರಳು ಇತರೆ ಆರ್ಥಿಕ ಕ್ಷೇತ್ರಗಳ ಮೇಲೆ ಬಿದ್ದಿರುವಂತೆ ಸಹಕಾರ ಕ್ಷೇತ್ರದ ಮೇಲೂ ಬಿದ್ದಿದೆ. ಇದರಿಂದಾಗಿ ಸಹಕಾರ ಕ್ಷೇತ್ರ ಎದುರಿಸಬೇಕಾದ ಸವಾಲುಗಳು ಮತ್ತು ಎದುರಿಸಬೇಕಾದ ತೊಂದರೆಗಳು ಅಪಾರ. ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ಪ್ರಸಕ್ತ ಬೆಳವಣಿಗೆಗಳಿಗೆ ಪೂರಕವಾಗಿ ಕಾರ್ಯಯೋಜನೆಯನ್ನು ರೂಪಿಸಬೇಕಾದ ಅನಿವಾರ್ಯತೆ ಇದೆ.

ಲಾಕ್‌ಡೌನ್ ಕಾರಣದಿಂದ ಸೌಹಾರ್ದ ಸಹಕಾರ ಕ್ಷೇತ್ರದ ಮೇಲೆ ಉಂಟಾಗುವ ಪರಿಣಾಮ ಹಾಗೂ ಪರಿಹಾರೋಪಾಯಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದ್ದು ಇವುಗಳಲ್ಲಿ ಅಗತ್ಯ ಬದಲಾವಣೆ/ಸೇರ್ಪಡೆಗಳನ್ನು ಮಾಡಿಕೊಳ್ಳುವುದರೊಂದಿಗೆ ಸೌಹಾರ್ದ ಸಹಕಾರಿಗಳು ಸೂಕ್ತ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕೆನ್ನುವುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ.

**ಲಾಕ್‌ಡೌನ್ ಕಾರಣದಿಂದ ಸೌಹಾರ್ದ ಸಹಕಾರ ಕ್ಷೇತ್ರದ ಮೇಲೆ ಉಂಟಾಗುವ ಪರಿಣಾಮ :**

1. ಸಹಕಾರಿಯು ನಿಗದಿಪಡಿಸಿಕೊಂಡಿರುವ ಗುರಿಯನ್ನು ತಲುಪಲು ಕಷ್ಟಸಾಧ್ಯವಾಗುವುದರಿಂದ ಸಹಕಾರಿಗಳ ವ್ಯವಹಾರದಲ್ಲಿ ಮತ್ತು ಲಾಭ ಗಳಿಕೆಯಲ್ಲಿ ಇಳಿಮುಖವಾಗಬಹುದು.
2. ಸಾಲ ಮರುಪಾವತಿ ವಿಳಂಬವಾಗುವ ಕಾರಣದಿಂದ ಸಾಲ ವಸೂಲಾತಿ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇರುತ್ತದೆ.
3. ಲಾಕ್‌ಡೌನ್ ಕಾರಣದಿಂದಾಗಿ ಸಹಕಾರಿಯ ಸದಸ್ಯರು ಹಣಕಾಸಿನ ಮುಗ್ಗಟ್ಟು ಎದುರಿಸುವ ಕಾರಣ ಲಾಕ್‌ಡೌನ್ ಅವಧಿ ಮುಗಿದ ನಂತರ ಹಣ ಹಿಂಪಡೆಯಲು ಸದಸ್ಯರು ಹೆಚ್ಚಿನ ಬೇಡಿಕೆ ಇಡಲಾರಂಭಿಸುತ್ತಾರೆ. ಈ ಸಮಯದಲ್ಲಿ ದ್ರವ್ಯಾಸ್ಥಿ ನಿರ್ವಹಣೆ ಮಾಡದ ಸಹಕಾರಿಗಳು ಸಂಕಷ್ಟಕ್ಕೆ ಸಿಲುಕುತ್ತವೆ.
4. 2019-20 ಮತ್ತು 2020-21ನೇ ಸಾಲಿನಲ್ಲಿ ಸಹಕಾರಿಗಳ ಲಾಭ ಗಳಿಕೆಯ ಪ್ರಮಾಣ, ದುಡಿಯುವ ಬಂಡವಾಳದ ಬೆಳವಣಿಗೆಯ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇರುತ್ತದೆ.
5. ಕಡಿಮೆ ಲಾಭ ಗಳಿಸುತ್ತಿರುವ ಸಹಕಾರಿ ಸಂಸ್ಥೆಗಳು ನಷ್ಟಕ್ಕೆ ಒಳಗಾಗಬಹುದು. ಪ್ರಸ್ತುತ ನಷ್ಟದಲ್ಲಿರುವ, ಆದರೆ ಮುಂದಿನ ದಿನಗಳಲ್ಲಿ ಲಾಭ ಗಳಿಸಬಹುದೆಂದು ಆಶಾಭಾವನೆ ಹೊಂದಿದ್ದ ಸಹಕಾರಿಗಳ ಕಾರ್ಯನಿರ್ವಹಣೆ ಕಷ್ಟಸಾಧ್ಯವಾಗುವ ಸಾಧ್ಯತೆ ಹೆಚ್ಚಿರುತ್ತದೆ.
6. ಸಹಕಾರಿಗೆ ಗುಣಮಟ್ಟದ ಸಾಲಗಾರನ ಲಭ್ಯತೆ ಕಷ್ಟಸಾಧ್ಯವಾಗಬಹುದು.

7. ನೂತನವಾಗಿ ಆರಂಭಗೊಂಡಿರುವ ಸಹಕಾರಿಗಳ ಬೆಳವಣಿಗೆಯ ಹಾದಿ ದುರ್ಗಮವಾಗುವ ಸಾಧ್ಯತೆ ಇರುತ್ತದೆ.

**<u>ಪರಿಹಾರೋಪಾಯಗಳು :</u>**

1. ಸಹಕಾರಿಯ ಆದಾಯದ ಸೋರಿಕೆ ಎಲ್ಲೆಲ್ಲಿ ಆಗುತ್ತಿದೆ ಎನ್ನುವುದನ್ನು ಪತ್ತೆಹಚ್ಚಿ ಸೋರಿಕೆಯನ್ನು ತಡೆಗಟ್ಟುವುದು.
2. ಸಹಕಾರಿಯ ವ್ಯವಹಾರಾಭಿವೃದ್ಧಿ ಯೋಜನೆಯನ್ನು ರೂಪಿಸಿಕೊಂಡು ತ್ರೈಮಾಸಿಕ ಪ್ರಗತಿ ಪರಿಶೀಲನೆ ಮಾಡುವುದು.
3. ಕಡಿಮೆ ವೆಚ್ಚದ ನಿದಿಗಳ ಸಂಗ್ರಹಕ್ಕೆ ಹೆಚ್ಚು ಗಮನಹರಿಸುವುದು ಹಾಗೂ ಗುಣಮಟ್ಟದ ಸಾಲ ನೀಡಿಕೆಗೆ ಹೆಚ್ಚಿನ ಆದ್ಯತೆ ನೀಡುವುದು.
4. ಎರಡು ವರ್ಷಗಳಿಗಿಂತ ಹೆಚ್ಚು ನಷ್ಟದಲ್ಲಿರುವ ಶಾಖೆಗಳನ್ನು ಮುಚ್ಚಲು ಕ್ರಮಕೈಗೊಳ್ಳುವುದು ಹಾಗೂ ನೂತನ ಶಾಖೆಗಳ ಆರಂಭ ಮಾಡದಿರುವುದು.
5. ಸಹಕಾರಿಯ ಸಾಮಾನ್ಯ ಸಭೆ, ಗ್ರಾಹಕರ ಸಭೆಗಳನ್ನು ಸರಳವಾಗಿ ನಡೆಸುವುದು.
6. ಆಡಳಿತಾತ್ಮಕ ವೆಚ್ಚಗಳನ್ನು ಕಡಿಮೆ ಮಾಡುವುದು ಹಾಗೂ ಮಾನವ ಸಂಪನ್ಮೂಲಗಳ ಸದ್ಬಳಕೆಯ ಯೋಜನೆ ರೂಪಿಸುವುದು.
7. ಸದಸ್ಯರೊಂದಿಗೆ ನಿರಂತರ ಸಂಪರ್ಕದಲ್ಲಿರುವ ಮೂಲಕ ಹಾಗೂ ಸದಸ್ಯರ ಕಷ್ಟಗಳ ನಿವಾರಣೆಯಲ್ಲಿ ಭಾಗಿಯಾಗುವ ಮೂಲಕ ಸಹಕಾರಿಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳಲು ಶ್ರಮಿಸುವುದು.